# ಸಾರ್ಥಕ

ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. (Answer the following questions)

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?

ಉ: ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಭತ್ತ ಬೆಳೆಯುವಲ್ಲಿ ಬೀಳುತ್ತದೆ.

೨. ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಯಾರಿಗೆ ಸಿಗುತ್ತದೆ?

ಉ: ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಮೀನುಗಳಿಗೆ ಸಿಗುತ್ತದೆ.

೩. ದೇಹ ಏಕೆ ವ್ಯರ್ಥವಾಗಿದೆ?

ಉ: ದೇಹ ಸ್ವಾರ್ಥವನ್ನು ನೆನೆದು ವ್ಯರ್ಥವಾಗಿದೆ?

೪. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? ವಿವರಿಸಿ.

FOR KANNADA

ಉ: ಬೂದಿಯನ್ನು ಕೊಳದಲ್ಲಿ ಬಿಟ್ಟಾಗ ಬೂದಿ ಕೆಸರನ್ನು ಸೇರಿ, ಹೊಸ ತಾವರೆಯು ಅರಳಿದರೆ ಆ ಮೂಲಕ ಹುಟ್ಟು ಸಾವಿನಲ್ಲಿ ಧನ್ಯವಾಗುತ್ತದೆ.

**೫. ಸಾರ್ಥಕ** ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ.

ಉ: ಮಾನವನು ಸ್ವಾರ್ಥಿ. ಆತನು ಬದುಕಿದ್ದಾಗ ತನ್ನ ಜೀವನ ಸಾರ್ಥಕತೆ ಪಡೆಯದಿದ್ದರೂ, ಸತ್ತ ಮೇಲಾದರೂ ಧನ್ಯತೆಯನ್ನು ಪಡೆಯಲಿ ಎಂದು ಕವಿ ಹೇಳಿರುವ ಮಾತು ಮೆಚ್ಚುವ ಅಂಶವಾಗಿದೆ. ಸತ್ತ ನಂತರ ದೇಹವನ್ನು ಸುಡಲಾಗುತ್ತದೆ. ಗಾಳಿಯಲ್ಲಿ ಆ ಬೂದಿಯನ್ನು ತೂರಿದಾಗ ಭತ್ತ ಬೆಳೆಯುತ್ತದೆ. ಬೂದಿಯನ್ನು ಕೊಳದಲ್ಲಿ ಬಿಟ್ಟಾಗ ಬೂದಿ ಕೆಸರನ್ನು ಸೇರಿ, ಹೊಸ ತಾವರೆಯು ಅರಳುತ್ತದೆ. ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಮೀನುಗಳಿಗೆ ಸಿಗುತ್ತದೆ. ಹೀಗೆ ಸತ್ತ ಮೇಲಾದರೂ ಪರೋಪಕಾರಕ್ಕೆ ದೇಹ ಬಳಕೆಯಾಗಲಿ ಎಂದು ಕವಿ ಹೇಳಿರುವದು ಮೆಚ್ಚುಗೆಯಾಗುತ್ತದೆ.